ನೋಡುತ್ತಿದ್ದರು. ಒಮ್ಮೊಮ್ಮೆ ಅವರಿಗೆ ಚಂದಿರನಲ್ಲಿ ಬಂಗಾರ ಬಣ್ಣದ ನೀರು ಹರಿಯುತ್ತಿರುವಂತೆ, ಕೆಲವೊಮ್ಮೆ ತಲೆದೂಗುವ ಭತ್ತದ ತೆನೆಯಂತೆ, ಕೆಲವು ಸಲ ತೊಟ್ಟಿಕ್ಕುವ ಬಂಗಾರದ ಎರಕದಂತೆ ಕಾಣುತ್ತಿತ್ತು. ಹೀಗೆ ಎಷ್ಟುಹೊತ್ತು ನೋಡಿದರೂ ಅವರ ಕಣ್ಣುಗಳು ತಣಿಯಲಿಲ್ಲ. ಬದಲಾಗುತ್ತಿದ್ದ ಚಿತ್ರಗಳೊಂದಿಗೆ ಕವಿತೆಯ ಭಾವವೊಂದು ಅವರೊಳಗೆ ಒಮ್ಮೆಲೆ ನುಗ್ಗಿಬಂದಿತು:

ಹೊತ್ತು ಹುಟ್ಟುವುದು ಮಧುರೆಯಲ್ಲಿ ಯಾವಾಗ
ಯಾವಾಗ ತಾಳೆ ಹೂವಿನ ಸುಗಂಧ ಅರಳುವುದು
ಕನ್ನಗಿಯ ಶಿಲಂಬು ದನಿ ಮಾಡುವುದು
ಯಾವಾಗ
ಯಾವಾಗ ಕಡಲ ಅಲೆಗಳ ಮೇಲೆ ಕೋವಲನು
ತೇಲಿ ಬರುವನು
ಬರುವಳು ಮಳೆಯ ತೇರಿನಲ್ಲಿ
ಮಣಿಮೇಕಲೆಯು



ಹಳೆಯ ನೆನಪುಗಳು ಉದುರು ಮಳೆಯಂತೆ ಅವರ ಮನಸ್ಸನ್ನು ಅನಾಮತ್ತಾಗಿ ತೋಯಿಸಿತ್ತು. ಇದ್ದಕ್ಕಿದ್ದಂತೆ ಯಾರೋ ಬಾಗಿಲು ಬಡಿದ ಶಬ್ದ!

ಶಾತ್ತನಾರ್‌ಗೆ ಆಶ್ಚರ್ಯವಾಯಿತು. ಇಂತಹ ಸಕ್ಕಟ್ಟೆ ಸರಿರಾತ್ರಿಯಲ್ಲಿ ಯಾರು ಬಂದಿರಬಹುದು? ಕಳ್ಳಕಾಕರು ಇರಬಹುದೆ? ಛೇ! ಮಧುರೆಯಲ್ಲಿ ಕಳ್ಳರೆ! ಇರಲಾರದು. ಇಂದು ಚೈತ್ರಹುಣ್ಣಿಮೆಯ ಸಂತೆಯಾಗಿದ್ದರಿಂದ ಅಂಗಡಿಯಲ್ಲಿ ವ್ಯಾಪಾರ ಮುಗಿಸಿ ಮನೆಗೆ ಬರುವ ಹೊತ್ತಿಗೆ ತಡವಾಗಿತ್ತು. ಆದರೂ ಈ ಹೊತ್ತಿನಲ್ಲಿ ಬಂದವರು ಯಾರಿರಬಹುದು? ಇಂತಹ ಅವೇಳೆಯಲ್ಲಿ ಮನೆಯವರನ್ನು ಎಬ್ಬಿಸುವುದು ಬೇಡ ಎಂದುಕೊಂಡರು. ಯಾವ ಜೀವಕ್ಕೆ ಏನು ಅವಶ್ಯಕತೆಯಿದೆಯೋ! ಎಂದು ಶಾತ್ತನಾರ್ ಮನಸ್ಸು ಯೋಚಿಸಲಾರಂಭಿಸಿತು.

ಮತ್ತೊಮ್ಮೆ ಬಾಗಿಲು ಬಡಿದ ಶಬ್ದ...

ಆ ಶಬ್ದದಲ್ಲಿದ್ದ ದುಗುಡ, ಆತಂಕ, ತವಕ ಶಾತ್ತನಾರ್‌ಗೆ ತಾಕಿತು. 'ಬಂದೆ...' ಎಂದು ನಿಧಾನವಾಗಿ ಮೇಲೆದ್ದರು ಶಾತ್ತನಾರ್. ಅರಳೆಯಂತೆ ಬೆಳ್ಳಗಾಗಿದ್ದ ನೀಳವಾದ ಕೂದಲು, ಅವರು ತೊಟ್ಟ ಬಟ್ಟೆಯಂತೆಯೇ ಶುಭ್ರವಾಗಿದ್ದ ನೀಳವಾದ ಗಡ್ಡ, ಕಲೆಯಿಲ್ಲದ ತೊಟ್ಟ ಬಟ್ಟೆ, ದೇಹ ಕೊಂಚ ಬಾಗಿದ್ದನ್ನು ಬಿಟ್ಟರೆ, ಅವರ ದೇಹ ಆರೋಗ್ಯವಾಗಿಯೇ ಇತ್ತು. ಹೊರಗಿನ ಚಂದಿರನ ಬೆಳಕು ಅವರು ಮಲಗಿದ್ದ ಕೊಠಡಿಯ ಕತ್ತಲನ್ನು ತೆಳುವಾಗಿಯಾದರೂ ಸರಿಸಿತ್ತು. ನಿಧಾನವಾಗಿ ಕೊಠಡಿಯನ್ನು ದಾಟಿ ಮುಂಬಾಗಿಲಿನ ಬಳಿಗೆ ಬಂದರು. ಮತ್ತೊಂದು ಸಲ ಬಾಗಿಲನ್ನು ಬಡಿಯುವ ಶಬ್ದ. ಆ ಶಬ್ದ ಈ ಸಲ ಅವರ ಗುಂಡಿಗೆಗೆ ಹತ್ತಿರವಾಗಿಯೇ ಇತ್ತು. ಅಗಳಿ ಸರಿಸಿ ನಿಧಾನವಾಗಿ ಬಾಗಿಲು ತೆರೆದರು.

ಹೊರಗಿನ ಬೆಳುದಿಂಗಳ ಬೆಳಕು ಶಾತ್ತನಾರ್ ಮನೆಯ ಮುಂದಿನ ಜಗುಲಿಯವರೆಗೂ ಎಟಕುತ್ತಿರಲಿಲ್ಲವಾದ್ದರಿಂದ, ಬಾಗಿಲ ಹೊರಗೆ ನಿಂತವರ ಮುಖದ ಗುರುತು ತಿಳಿಯುತ್ತಿರಲಿಲ್ಲ! ಸುಮಾರು ಹದಿನೈದರಿಂದ ಇಪ್ಪತ್ತು ಜನರಿದ್ದ ಒಂದು ಸಣ್ಣ ಗುಂಪು ಅದು. ಬಂದವರಲ್ಲಿ ಎಲ್ಲ ವಯೋಮಾನದವರೂ ಇದ್ದರು. ಬಂದವರು ಅತಿಥಿಗಳೋ, ದಾರಿಹೋಕರೋ ಅಥವಾ ಆ ರಾತ್ರಿ ಜಗುಲಿಯ ಮೇಲೆ ತಂಗಲು ಒಪ್ಪಿಗೆ ಕೇಳಲು